## ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/31/ಸುತ್ತೋಲೆ/ರೂಸಾ/2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-01. ದಿ:05.10.2018
ದೂ.ಸಂ.080-22343905.

### "ಸುತ್ತೋಲೆ"

**ವಿಷಯ:** ರೂಸಾ 1.0 ಯೋಜನೆಗೆ ಒಳಪಟ್ಟಿರುವ ಹಾಗೂ 2.0 ಅಡಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುವ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳು ರೂಸಾ MIS Portal ನಲ್ಲಿ ನೊಂದಾವಣಿ ಆಗುವ ಬಗ್ಗೆ.

**ಉಲ್ಲೇಖ:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತ್, ಬೆಂಗಳೂರು, ಇವರ ಇ-ಮೇಲ್ ಸಂದೇಶ: MIS Portal Launch - 29th Sept - 7th Oct.

******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, MHRD ರೂಸಾ 1.0 ಯೋಜನೆಯಡಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗೂ ರೂಸಾ 2.0 ಅಡಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುವ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳು ಉಲ್ಲೇಖಿತ MHRDಯ ಇ-ಮೇಲ್ ಸಂದೇಶದಲ್ಲಿ ತಿಳಿಸಿರುವಂತೆ, ರೂಸಾ MIS (Management Information System) Portal ನಲ್ಲಿ ದಿನಾಂಕ:07/10/2018 ರೊಳಗಾಗಿ ನೊಂದಾವಣಿಯಾಗುವುದು ಕಡ್ಡಾಯವಾಗಿರುತ್ತದೆ.

ಪರಿಶೀಲಿಸಲಾಗಿ, ಕೆಲವು ಕಾಲೇಜುಗಳು ಸದರಿ Portal ನಲ್ಲಿ ಮಾಹಿತಿ ಒದಗಿಸಲು ಕೆಲವೊಂದು ಮಾಹಿತಿಯ ಕೊರತೆಯಿರುವುದು ತಿಳಿದುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕಾಲೇಜುಗಳ ಅಭಿವೃದ್ಧಿ ದೃಷ್ಟಿಯಿಂದ, ಪ್ರಾಂಶುಪಾಲರುಗಳು ಕಾಲೇಜಿನ ಹಂತದಲ್ಲಿ ರೂಸಾ ನೋಡಲ್ ಅಧಿಕಾರಿಗೆ ಸಹಕಾರಿಯಾಗುವಂತೆ, ಕಾಲೇಜಿನ IQAC Co-ordinator, AISHE Co-ordinator ಹಾಗೂ ಕಛೇರಿಯ ಸಿಬ್ಬಂದಿಗಳು ಒಳಗೊಂಡಂತೆ ತಂಡವನ್ನು ರಚಿಸಿ ಸದರಿ Portal ನಲ್ಲಿ ಮಾಹಿತಿಯನ್ನು ತುರ್ತಾಗಿ ಅಪ್‌ಲೋಡ್ ಮಾಡಲು ಆದೇಶಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:-

ರೂಸಾ 1.0 ಯೋಜನೆಗೆ ಒಳಪಟ್ಟಿರುವ ಹಾಗೂ 2.0 ಅಡಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳು ಹಾಗೂ ರೂಸಾ ನೋಡಲ್ ಅಧಿಕಾರಿಗಳು.

ಪ್ರತಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ-ಮಾಹಿತಿಗಾಗಿ.
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತ್, ನಂ.30, ಪ್ರಸನ್ನಕುಮಾರ್ ಬ್ಲಾಕ್, ಸೆಂಟ್ರಲ್ ಯುನಿವರ್ಸಿಟಿ ಕ್ಯಾಂಪಸ್, ವೈ. ರಾಮಚಂದ್ರ ರಸ್ತೆ, ಬೆಂಗಳೂರು-560009.
5. ಡಾ|| ಭಾಗ್ಯವಾನ್ ಮುದಿಗೌಡ್ರ, ರಾಜ್ಯ ರೂಸಾ ನೋಡಲ್ ಅಧಿಕಾರಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು- ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ.